ಪ್ರತಿಭಾವಂತೆ ಲಕ್ಷ್ಮೀಬಾಯಿ ಸ್ವಲ್ಪ ಕಾಲದಲ್ಲಿಯೇ ಅಭಿನಯದಲ್ಲಿ ಪ್ರೌಢಿಮೆ ಗಳಿಸಿದ್ದು ಮಾತ್ರವಲ್ಲದೆ ಕಂಪೆನಿಯ ಪ್ರಮುಖ ಕಲಾವಿದರ ಸಾಲಿಗೆ ಸೇರಿದರು. ಬಾಳಪ್ಪನವರ ಬಾಳಸಂಗಾತಿಯೂ ಆದ ಲಕ್ಷ್ಮೀದೇವಿ ಸಂಸಾರ ಸರಿದೂಗಿಸುತ್ತ ಮುಖ್ಯ ಪಾತ್ರಗಳನ್ನೂ ನಿಭಾಯಿಸಿ ಮೆಚ್ಚುಗೆಗೆ ಪಾತ್ರರಾದರು.

ಯಾವ ಪಾತ್ರವಾದರೂ ಅದಕ್ಕೊಂದು ವಿಶಿಷ್ಟ ಸ್ಪರ್ಶ ನೀಡಿ ಅಭಿನಯಿಸುವ ಕಲೆಯನ್ನು ರೂಢಿಸಿಕೊಂಡ ಅವರು ಪ್ರತಿ ಪಾತ್ರದಲ್ಲೂ ಒಂದೊಂದು ವಿಶೇಷತೆಯನ್ನು ಕಟ್ಟಿಕೊಡುವಲ್ಲಿ ಪಳಗಿದರು. ಇದು ಇಡೀ ವೃತ್ತಿ ರಂಗಭೂಮಿಯ ಗಮನ ಸೆಳೆದಿದ್ದು ವಿಶೇಷ.

ವೃತ್ತಿ ರಂಗಭೂಮಿಯಲ್ಲಿ ಮೊದ ಮೊದಲು ಮಹಿಳೆಯರು ಅಭಿನಯಿಸುತ್ತಿರಲಿಲ್ಲ. ಪುರುಷ ನಟರೇ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಕಾಲ ಅದು. ಏಣಗಿ ಬಾಳಪ್ಪನವರು ಮಹಿಳಾ ಪಾತ್ರಗಳಿಂದ ಪ್ರಸಿದ್ಧರಾಗಿದ್ದರು. ಅವರ ಮಡದಿ ಲಕ್ಷ್ಮೀಬಾಯಿ ಸ್ತ್ರೀ ಪಾತ್ರಗಳನ್ನು ಅಭಿನಯಿಸುವಾಗ ಎಲ್ಲರ ನಿರೀಕ್ಷೆ ಬೇರೆ ಬಗೆಯದಾಗಿತ್ತು. ಅದಕ್ಕೆ ಪೂರಕವಾಗಿ ಅವರು ಹೊಸ ಬಗೆಯ ಅಭಿನಯ ಕಟ್ಟಿಕೊಟ್ಟರು.

'ಬಸವೇಶ್ವರ' ನಾಟಕದಲ್ಲಿ ನೀಲಾಂಬಿಕಾ, 'ಕುರುಕ್ಷೇತ್ರ'ದ ದ್ರೌಪದಿ. 'ಹರಿಶ್ಚಂದ್ರ' ತಾರಾಮತಿ – ಈ ಎಲ್ಲಾ ಪೌರಾಣಿಕ ಪಾತ್ರಗಳಿಗೂ ಲಕ್ಷ್ಮೀಬಾಯಿ ಭಿನ್ನ ಬಗೆಯ ಅಭಿವ್ಯಕ್ತಿ ನೀಡಿ ನೋಡುಗರಿಂದ ಸೈ ಎನ್ನಿಸಿಕೊಂಡರು. ಕಲಾವೈಭವ ನಾಟಕ ಸಂಸ್ಥೆ ಯಶಸ್ಸಿನ ಉತ್ತುಂಗದಲ್ಲಿದ್ದಾಗ ಬಹುತೇಕ ಎಲ್ಲಾ ನಾಟಕಗಳ ಪ್ರಮುಖ ಪಾತ್ರಗಳನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ ಲಕ್ಷ್ಮೀಬಾಯಿ ಸಂಸ್ಥೆಯ ನಿರ್ವಹಣೆಯಲ್ಲೂ ಮುಖ್ಯಪಾತ್ರ ವಹಿಸಿದ್ದರು.

'ಕಿತ್ತೂರುರಾಣಿ ಚೆನ್ನಮ್ಮ' ನಾಟಕದಲ್ಲಿ ಚೆನ್ನಮ್ಮನಾಗಿ ನಟಿಸಿದ ಲಕ್ಷ್ಮೀಬಾಯಿ ಉಳಿದೆಲ್ಲ ಸಮಕಾಲೀನ ಪಾತ್ರಧಾರಿಗಳಿಗಿಂತ ಬೇರೆ ರೀತಿಯಲ್ಲಿಯೇ ನೋಡುಗರ ಮನಗೆದ್ದರು. ಇದೇ ರೀತಿ 'ಲಂಕಾದಹನ'ದ ಸೀತೆಯಾಗಿಯೂ ಮಿಂಚಿದರು.

ಕಲಾವೈಭವದ ಯಶಸ್ವಿ ನಾಟಕಗಳಲ್ಲಿ ಒಂದಾದ 'ಹೇಮರೆಡ್ಡಿ ಮಲ್ಲಮ್ಮ' ಅವರಿಗೆ ಹೆಸರು ತಂದುಕೊಟ್ಟಿತು. ಸಾಮಾಜಿಕ ನಾಟಕಗಳಲ್ಲೂ ಅವರ ನಟನೆ ಭಿನ್ನ ಬಗೆಯದಾಗಿತ್ತು. ಇದಕ್ಕೆ 'ಚಲೇಜಾವ್' ನಾಟಕದ ಆಶಾ, 'ಕುಂಕುಮ'ದ ಅನುರಾಧ, 'ವಧೂವರ' ನಾಟಕದ ವಾಸಂತಿ ಪಾತ್ರಗಳು ಸಾಕ್ಷಿಯಾಗಿದ್ದವು. ಅಕ್ಕಮಹಾದೇವಿ, ಪಠಾಣ, ಪಾಶ, ಶಾಲಾ ಮಾಸ್ತರ್ ಪಾತ್ರಗಳಲ್ಲಿ ಮನೋಜ್ಞ ಅಭಿನಯವಿತ್ತ ಅವರು ತಮ್ಮ ಕಂಪೆನಿಯನ್ನು ನಿಲ್ಲಿಸುವವರೆಗೂ ನಟಿಸುತ್ತಿದ್ದರು. ಬಾಳಪ್ಪನವರೊಂದಿಗೆ ವಿಶ್ರಾಂತ ಬದುಕು ನಡೆಸುವಾಗಲೂ ಪೋಷಕ ಪಾತ್ರಗಳನ್ನು ಹವ್ಯಾಸಿ ಕಂಪೆನಿಗಳಿಗಾಗಿ ಒಪ್ಪಿಕೊಂಡು ಅಭಿನಯಿಸುತ್ತಿದ್ದ ಲಕ್ಷ್ಮೀಬಾಯಿ ಅವರಿಗೆ ಇಳಿವಯಸ್ಸಿನಲ್ಲಿಯೂ ನಟಿಸುವ ಉತ್ಸಾಹ ಕಡಿಮೆಯಾಗಿಲ್ಲ.

ಸಾಂದರ್ಭಿಕ ನಾಟಕಗಳನ್ನು ಪ್ರದರ್ಶಿಸುವಲ್ಲಿ ಬಾಳಪ್ಪನವರಿಗೆ ವಿಶೇಷ ಪರಿಣತಿ. ಅಂತದ್ದೊಂದು ನಾಟಕ 'ಕರ್ನಾಟಕ ಏಕೀಕರಣ'. ಅದರಲ್ಲಿ ಭುವನಾ ಪಾತ್ರ ವಹಿಸಿದ್ದರು ಲಕ್ಷ್ಮೀಬಾಯಿ. ಸ್ವಾತಂತ್ರ್ಯ ಚಳವಳಿಯ ವಸ್ತು ಇರುವ 'ಚಲೇಜಾವ್'ನಲ್ಲೂ ಇವರ ಛಾಪು ಇತ್ತು. ರಂಗದ ಮೇಲೆ ಅನೇಕ ರೀತಿಯ ಪಾತ್ರಗಳನ್ನು ನಿರ್ವಹಿಸಿದ ಪ್ರತಿಭಾವಂತ ನಟಿ ಲಕ್ಷ್ಮೀಬಾಯಿ ಏಣಗಿ ಅವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ ಸೇರಿದಂತೆ ದೊರತಿರುವ ಗೌರವ, ಪುರಸ್ಕಾರಗಳು ಹತ್ತು ಹಲವು.

⌘